ಇಂಗ್ಲಿಷ್ ಭಾಷೆ, ಶಿಕ್ಷಣ ಮತ್ತು ಸಾಹಿತ್ಯವು ಆಧುನಿಕ ಕನ್ನಡದ ಬೆಳವಣಿಗೆಯಲ್ಲಿ ಪ್ರಮುಖವಾದ ಪಾತ್ರ ವಹಿಸಿದ್ದನ್ನು ಇಲ್ಲಿ ಒತ್ತಿ ಹೇಳಬೇಕಾಗಿಲ್ಲ. ದ್ವಿಭಾಷಿಕ ಸಂವೇದನೆಯು ಬಹಳ ಕಾಲದಿಂದ ಕನ್ನಡ ಮನಸ್ಸಿನ ವಿಶಿಷ್ಟ ಲಕ್ಷಣವಾಗಿದೆ. ಸಾಹಿತ್ಯದ ಸಂದರ್ಭದಲ್ಲಿ, ಬಿ.ಎಂ. ಶ್ರೀಕಂಠಯ್ಯನವರ 'ಇಂಗ್ಲೀಷ್ ಗೀತಗಳು' (1922) ಸುತ್ತಮುತ್ತಲೇ ಪ್ರಾರಂಭವಾದ ಈ ಪರಂಪರೆಯಲ್ಲಿ, ಶೇಕ್ಸ್‌ಪಿಯರ್, ಮಿಲ್ಟನ್, ಟಾಲ್‌ಸ್ಟಾಯ್, ಎಲಿಯಟ್, ಲಾರೆನ್ಸ್ ಅವರಂತಹ ಸೃಜನಶೀಲ ಲೇಖಕರಿಂದ ಹಿಡಿದು, ಲೀವಿಸ್, ರಸೆಲ್, ಸಾರ್ತ್ರ್, ದೆರಿದಾ, ಫುಕೋ, ಎಡ್ವರ್ಡ್ ಸೈದ್ ಅಂತಹ ಚಿಂತಕರವರೆಗೆ, ಇಂಗ್ಲಿಷ್ ಮೂಲಕವೇ ಕನ್ನಡ ಲೋಕವನ್ನು ಪ್ರವೇಶಿಸಿದರು. ಡಿಆರ್ ಬರುವ ಹೊತ್ತಿಗಾಗಲೇ ಪಶ್ಚಿಮದಿಂದ ಪ್ರಭಾವಿತವಾದ ನವ್ಯ ಸಾಹಿತ್ಯ ಕನ್ನಡದಲ್ಲಿ ಬೇರು ಬಿಟ್ಟಿತ್ತು. ಮಾತ್ರವಲ್ಲ, ಕನ್ನಡದಲ್ಲಿ ಬರೆಯತೊಡಗಿದ ಇಂಗ್ಲಿಷ್ ಅಧ್ಯಾಪಕರ ಸಂಖ್ಯೆಯೂ ಹೆಚ್ಚತೊಡಗಿತ್ತು.



ಈಗಾಗಲೇ ಕನ್ನಡದ ಕಾವ್ಯ-ಜ್ಞಾನ ಪರಂಪರೆಗಳನ್ನು ಆಳವಾಗಿ ಅಭ್ಯಸಿಸಿದ್ದ ಡಿಆರ್ ಅವರಿಗೆ, ಇಂಗ್ಲಿಷ್ ಭಾಷೆಯ ವಿದ್ವತ್ ಲೋಕವು ಹೊಸ ವಿಶ್ವವನ್ನು ತೆರೆದುಕೊಟ್ಟಿತು. ವಿಮರ್ಶಕ ಟಿ.ಪಿ. ಅಶೋಕ ಅವರು ಸೂಚಿಸಿದಂತೆ, 'ಕನ್ನಡ ಮಾಧ್ಯಮದಲ್ಲಿ ಓದಿ, ಹಿಂದುಳಿದ ಸಾಮಾಜಿಕ ಹಿನ್ನೆಲೆಯಿಂದ ಬಂದ ಈ ದೊಡ್ಡಬಳ್ಳಾಪುರದ ಹುಡುಗ ಇಂಗ್ಲಿಷ್ ಅನ್ನು ಪೂರ್ತಿಯಾಗಿ ಅರಗಿಸಿಕೊಂಡದ್ದು ಒಂದು ಕಾದಂಬರಿಗೆ ವಸ್ತುವಾಗುವಂಥ ಸಾಧನೆಯಾಗಿದೆ.' ಈ ಮೂಲಕ ಜಾಗತಿಕ ಮಟ್ಟದಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿಗಳ ಕುರಿತು ನಡೆಯುತ್ತಿದ್ದ ಅಧ್ಯಯನಗಳು ಡಿಆರ್ ಅವರನ್ನು ಪ್ರಭಾವಿಸಿದವು; ಸ್ಥಳೀಯತೆಯಿಂದ ವಿಶ್ವಾತ್ಮಕತೆಯ ಕಡೆಗಿನ ಅವರ ಪಯಣಕ್ಕೆ ಇಂಗ್ಲಿಷ್ ಸೇತುವೆಯಾಯಿತು.

ಸಮಾಜಶಾಸ್ತ್ರಜ್ಞ ಚಂದನ ಗೌಡ ಅವರು ನನಗೆ ಹೇಳಿದಂತೆ, ಬೆಂಗಳೂರಿನಲ್ಲಿ ಸಾಮಾಜಿಕ ಹೋರಾಟಗಾರ ಸಿದ್ಧಾರ್ಥ ಮತ್ತು ಇಂಗ್ಲಿಷ್ ಪ್ರಾಧ್ಯಾಪಕ ಟಿ.ಜಿ. ವೈದ್ಯನಾಥನ್ (ಟಿ.ಜಿ.ವಿ.) ಅವರು ಡಿಆರ್ ಅವರಿಗೆ ಆಂಗ್ಲೋ-ಅಮೆರಿಕನ್ ಜಗತ್ತನ್ನು ಪರಿಚಯಿಸಿದ ಪ್ರಮುಖ ವ್ಯಕ್ತಿಗಳು. ಸಿದ್ಧಾರ್ಥ ಅವರು 'ಇನ್‌ಸ್ಟಿಟ್ಯೂಟ್ ಫಾರ್ ಕಲ್ಚರಲ್ ರಿಸರ್ಚ್ ಆ್ಯಂಡ್ ಆ್ಯಕ್ಷನ್' ಸಂಸ್ಥೆಯನ್ನು ನಡೆಸುತ್ತಿದ್ದರು. ದಲಿತ ಚಳವಳಿ ಮುಂತಾದ ವಿಷಯಗಳ ಲೇಖನಗಳನ್ನು ಒಳಗೊಂಡ ಡಿಆರ್ ಅವರ ಮೊದಲ ಇಂಗ್ಲಿಷ್ ಪುಸ್ತಕ 'ಫ್ಲೇಮಿಂಗ್ ಫೀಟ್ ಆಂಡ್ ಅದರ್ ಎಸ್ಸೇಸ್' (1993) ಅನ್ನು ಪ್ರಕಟಿಸಿದವರು ಅವರೇ. ಡಿಆರ್ ಅವರಿಗೆ ಇಂಗ್ಲಿಷ್ ಭಾಷೆಯಲ್ಲಿ ಬರುತ್ತಿದ್ದ ಹೊಸ ಹೊಸ ಪುಸ್ತಕಗಳನ್ನು ಅವರು ಪರಿಚಯಿಸುತ್ತಿದ್ದರಂತೆ. ಮಾನವಿಕ ಮತ್ತು ಸಾಮಾಜಿಕ ಅಧ್ಯಯನಗಳನ್ನು ವ್ಯಾಪಕವಾಗಿ ಆವರಿಸಿದ ಸಾಹಿತ್ಯಕ ಮತ್ತು ವಿಮರ್ಶಾತ್ಮಕ ಸಿದ್ಧಾಂತಗಳನ್ನು (ಲಿಟರರಿ ಅಂಡ್ ಕ್ರಿಟಿಕಲ್ ಥಿಯರಿ) ಟಿ.ಜಿ.ವಿ. ಅವರೊಂದಿಗಿನ ಸಂಪರ್ಕದ ಮೂಲಕ ಡಿಆರ್ ಸಂಪಾದಿಸಿಕೊಂಡಿರಬೇಕು. ಬಹುಶಃ ಇದೇ ಬಾಂಧವ್ಯದಿಂದಾಗಿ, ಅವರು ತಮ್ಮ ಮೊದಲ ವಿಮರ್ಶಾ ಲೇಖನಗಳ ಸಂಗ್ರಹ 'ಅಮೃತ ಮತ್ತು ಗರುಡ' (1983) ಕೃತಿಯನ್ನು ಟಿ.ಜಿ.ವಿ. ಅವರಿಗೆ ಅರ್ಪಿಸಿದ್ದಾರೆ. ಜೆ.ಎನ್.ಯು.ನಲ್ಲಿ ಓದಿ ಬಂದ ಕೆ.ಎನ್. ಹರಿಕುಮಾರ್ ಅಂಥವರ ಸಹವಾಸವೂ ಡಿಆರ್ ಅವರ ಈ ಬೌದ್ಧಿಕ ಬೆಳವಣಿಗೆಗೆ ಸಹಾಯಕವಾಯಿತೆಂದು ನಟರಾಜ್ ಹುಳಿಯಾರ್ ಅವರು ನನಗೆ ಹೇಳಿದ ನೆನಪು. ಉತ್ತಮ ವಿದ್ವಾಂಸನಾಗಲು ಪಡಬೇಕಾದ ಬೌದ್ಧಿಕ ಶ್ರಮದ ಮಹತ್ವವನ್ನು ಡಿಆರ್ ಅವರ ಜೀವನ ಚರಿತ್ರೆಯಲ್ಲಿ ಸ್ಪಷ್ಟವಾಗಿ ಗುರುತಿಸಬಹುದು.

ಹೀಗೆ ಪಶ್ಚಿಮದ ಜ್ಞಾನ ಪರಂಪರೆಗೆ ತೆರೆದುಕೊಳ್ಳುತ್ತ ಡಿಆರ್, ಕಾರ್ಲ್‌ಮಾರ್ಕ್ಸ್ ಮತ್ತು ಪೆರಿಯಾರ್ ಅವರ ಚಿಂತನೆಗಳಿಂದ ಪ್ರಭಾವಿತರಾಗಿ ಸಮಾಜವಾದ ಮತ್ತು ಮಾರ್ಕ್ಸ್‌ವಾದಗಳನ್ನು